# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ : ಸಂಪನ್ಮೂಲ ಕೇಂದ್ರಗಳಿಗೆ ವಿಶೇಷ ಶಿಕ್ಷಕರ ಹುದ್ದೆ ಮಂಜೂರು ಮಾಡುವ ಕುರಿತು.**

ಓದಲಾಗಿದೆ :-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ : 10-10-2016ರಂದು ನಡೆದ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ 10ನೇ ಕಾರ್ಯಕಾರಿಣಿ ಸಭೆಯ ನಡವಳಿ.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು, ಇವರ ಪತ್ರ ಸಂಖ್ಯೆ : ಸಶಿಅ/ರಾ.ಮಾ.ಶಿ.ಸ/ಸ.ಶಿ/ವಿ.ಸಂ.ಶಿ.ನೇ/2016-17, ದಿನಾಂಕ : 30-03-2017.

ಪ್ರಸ್ತಾವನೆ :-

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಕಾರ್ಯಕಾರಿಣಿ ಸಭಾ ನಡವಳಿಯಲ್ಲಿ ಐ.ಇ.ಡಿ.ಎಸ್.ಎಸ್. ಅಡಿಯಲ್ಲಿ 408 ವಿಶೇಷ ಸಂಪನ್ಮೂಲ ಶಿಕ್ಷಕರುಗಳನ್ನು ಬಾಹ್ಯ ಮೂಲಗಳಿಂದ ನೇಮಕ ಮಾಡಿಕೊಳ್ಳುವ ಕುರಿತಂತೆ ಚರ್ಚಿಸಲಾದ ವಿಷಯದಲ್ಲಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಈಗಾಗಲೇ ಸಮನ್ವಯ ಶಿಕ್ಷಣದಲ್ಲಿ ಅರ್ಹತೆ ಹೊಂದಿರುವ ಶಿಕ್ಷಕರುಗಳಿದ್ದು, ಅವುಗಳನ್ನು ಪ್ರತಿ ಬ್ಲಾಕ್‌ಗೆ 4 ಸಂಪನ್ಮೂಲ ಶಿಕ್ಷಕರಿಂದ ನಿಯೋಜಿಸಿಕೊಂಡು ಬ್ಲಾಕ್ ಸಂಪನ್ಮೂಲ ಕೇಂದ್ರಗಳ ನಿರ್ವಹಣೆ, ಶಾಲಾ ಸಿದ್ಧತಾ ಕೇಂದ್ರ ನಿರ್ವಹಣೆ ಮತ್ತು ಶಾಲೆಗಳಲ್ಲಿನ ಅಭ್ಯಾಸ ಮಾಡುತ್ತಿರುವ 1ರಿಂದ 10ನೇ ತರಗತಿಯ ವಿಶೇಷ ಅಗತ್ಯವುಳ್ಳ ಮಕ್ಕಳ ಶೈಕ್ಷಣಿಕ ಜವಾಬ್ದಾರಿಯನ್ನು ನೀಡಲು ಯೋಜಿಸಿರುವುದಾಗಿ ಸಭೆಯ ಗಮನಕ್ಕೆ ತರಲಾಗಿದ್ದು, ಸಭೆಯು ಇದಕ್ಕೆ ಅನುಮೋದನೆ ನೀಡಿ, ಎರಡು ತಿಂಗಳೊಳಗೆ ಕನಿಷ್ಠ 50 ತಾಲ್ಲೂಕುಗಳಲ್ಲಾದರೂ ಈ ರೀತಿಯಲ್ಲಿ ಸುಸಜ್ಜಿತವಾದ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಲು ಮತ್ತು ಅಗತ್ಯವಿರುವ ಆರ್ಥಿಕ ಇಲಾಖೆಯ ಸಹಮತಿ ಪಡೆದು ಹೊರ ಸಂಪನ್ಮೂಲ ಏಜೆನ್ಸಿಗಳ ಮುಖಾಂತರ ಸಧ್ಯದಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರುಗಳ ಸೇವೆಯನ್ನು ಖಾಯಂ ಶಿಕ್ಷಕರಗಳ ನೇಮಕ ಆಗುವವರೆಗೆ ಸೀಮಿತಗೊಳಿಸಿ ಪಡೆಯಲು ತೀರ್ಮಾನಿಸಲಾಗಿರುತ್ತದೆ.

ದಿನಾಂಕ : 10-11-2016ರಂದು ನಡೆದ ಆರ್.ಎಂ.ಎಸ್.ಎ.ಯ 10ನೇ ಕಾರ್ಯಕಾರಿ ಸಮಿತಿ ಸಭೆಯ ತೀರ್ಮಾನವನ್ನು ಅನುಸರಿಸಿ ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಜಿಲ್ಲಾ ಹಂತಕ್ಕೆ ಪ್ರೌಢಶಾಲಾ ಶಿಕ್ಷಕರ ಗ್ರೇಡ್-2ರ 34 ಹುದ್ದೆಗಳು ಹಾಗೂ ಬ್ಲಾಕ್ ಹಂತಕ್ಕೆ 408 ಪ್ರೌಢಶಾಲಾ ಸಹ ಶಿಕ್ಷಕರು ಗ್ರೇಡ್-2 ಹುದ್ದೆಗಳು ಮತ್ತು 408 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಮಂಜೂರಾತಿ ಕೋರಿ ಈ ಕೆಳಕಂಡಂತೆ ಪ್ರಸ್ತಾಪಿಸಿರುವುದಾಗಿದೆ :-

(1) 34 ಶೈಕ್ಷಣಿಕ ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಪ್ರೌಢಶಾಲಾ ಗ್ರೇಡ್-2 ಹುದ್ದೆಗಳನ್ನು ಸೃಜಿಸಿ, ಈ ಹುದ್ದೆಗಳಿಗೆ ವಿಶೇಷ ಬಿ.ಇಡಿ/ಎಂ.ಇಡಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರುವ ಹಾಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಸ್ಥಳ ನಿಯುಕ್ತಿಗೊಳಿಸಬೇಕಾಗಿದ್ದು, ಎಸ್.ಎಸ್.ಎ. ಮತ್ತು ಆರ್.ಎಂ.ಎಸ್.ಎ. ಸಮನ್ವಯ ಶಿಕ್ಷಣ ಚಟುವಟಿಕೆಗಳಿಗೆ ನೋಡಿಕೊಳ್ಳಬೇಕಾಗುತ್ತದೆಂದು;

(2) ಎಲ್ಲಾ 204 ಬ್ಲಾಕ್‌ಗಳಲ್ಲಿನ ಬ್ಲಾಕ್ ಸಂಪನ್ಮೂಲ ಕೇಂದ್ರಗಳಿಗೆ ತಲಾ 2ರಂತೆ ಪ್ರೌಢಶಾಲಾ ಗ್ರೇಡ್-2 ಶ್ರೇಣಿಯ ಮತ್ತು ತಲಾ 2ರಂತೆ ಪ್ರಾಥಮಿಕ ಶಾಲಾ ಶಿಕ್ಷಕರ ಶ್ರೇಣಿಯ ಹುದ್ದೆಗಳನ್ನು ಸೃಜಿಸಬೇಕಾಗುತ್ತದೆ. ಈ ಹುದ್ದೆಗಳಿಗೆ ಈಗಾಗಲೇ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಶೇಷ ಬಿ.ಇಡಿ/ವಿಶೇಶ ಡಿ.ಇಡಿ/ ತತ್ಸಮಾನ ವಿದ್ಯಾರ್ಹತೆ ಇರುವ ಶಿಕ್ಷಕರನ್ನು ಸ್ಥಳ ನಿಯುಕ್ತಿಗೊಳಿಸಬೇಕಾಗುತ್ತದೆಂದು;

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ 10ನೇ ಕಾರ್ಯಕಾರಿಣಿ ಸಭೆಯು ಸಹ ಸಂಪನ್ಮೂಲ ಕೇಂದ್ರಗಳಿಗೆ ವಿಶೇಷ ಶಿಕ್ಷಕರನ್ನು ನೇಮಿಸಲು ಅನುಮೋದನೆ

ನೀಡಿರುವುದರಿಂದ ಸಂಪನ್ಮೂಲ ಕೇಂದ್ರಗಳಿಗೆ ವಿಶೇಷ ಶಿಕ್ಷಕರನ್ನು ತಾತ್ಕಾಲಿಕವಾಗಿ ಸೃಜಿಸಲು ತೀರ್ಮಾನಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಇಡಿ 94 ಎಲ್‌ಬಿಪಿ 2017, ಬೆಂಗಳೂರು, ದಿನಾಂಕ : 22ನೇ ಮೇ 2017**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ 10ನೇ ಕಾರ್ಯಕಾರಿಣಿ ಸಭೆಯು ಸಹ ಸಂಪನ್ಮೂಲ ಕೇಂದ್ರಗಳಿಗೆ ವಿಶೇಷ ಶಿಕ್ಷಕರನ್ನು ನೇಮಿಸಲು ಅನುಮೋದನೆ ನೀಡಿರುವುದರಿಂದ ಸಂಪನ್ಮೂಲ ಕೇಂದ್ರಗಳಿಗೆ 408 ಪ್ರೌಢಶಾಲಾ ವಿಶೇಷ ಸಹ ಶಿಕ್ಷಕರು (ಗ್ರೇಡ್-2) ಮತ್ತು 408 ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಹುದ್ದೆಗಳು, ಒಟ್ಟು 816 ವಿಶೇಷ ಶಿಕ್ಷಕರ ಹುದ್ದೆಗಳನ್ನು ಎರಡು ವರ್ಷಗಳಿಗೆ ಮಾತ್ರ ತಾತ್ಕಾಲಿಕವಾಗಿ ಸೃಜಿಸಲು ಅನುಮತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 327 ವೆಚ್ಚ-8/2017, ದಿನಾಂಕ : 15-05-2017ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

Rajyashree V.T
(ವಿ. ಟಿ. ರಾಜ್ಯಶ್ರೀ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ).

---

**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001**

ಸಂಖ್ಯೆ: **ಸಂಖ್ಯೆ:ಸಿ4(5)ಹು.ಮಂ03/2017-18** ದಿನಾಂಕ: 22.06.2017

ಸರ್ಕಾರದ ಆದೇಶ ಸಂಖ್ಯೆ: ಇಡಿ 94 ಎಲ್‌ಬಿಪಿ 2017 ದಿನಾಂಕ: 22.05.2017ರ ಆದೇಶವನ್ನು ಕಳುಹಿಸುತ್ತಾ ಸದರಿ ಪತ್ರದಲ್ಲಿ ಸೂಚಿಸಿರುವಂತೆ ಕ್ರಮವಹಿಸಲು ತಿಳಿಸಿ ಯಥಾಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ನಿರ್ದೇಶಕರು [ಪ್ರೌಢಶಿಕ್ಷಣ]

ಪ್ರತಿಯನ್ನು
1. ರಾಜ್ಯ ಯೋಜನಾ ನಿರ್ದೇಶಕರು ಎಸ್.ಎಸ್.ಎ/ಆರ್.ಎಂ.ಎಸ್.ಎ ಬೆಂಗಳೂರು, ರವರ ಮುಂದಿನ ಕ್ರಮಕ್ಕಾಗಿ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರ್ಗಿ, ರವರ ಮುಂದಿನ ಕ್ರಮಕ್ಕಾಗಿ.
3. ವಿಭಾಗೀಯ ಸಹ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ ಮೈಸೂರು/ ಬೆಳಗಾವಿ/ ಕಲಬುರ್ಗಿ.
4. ನಿರ್ದೇಶಕರು [ಪ್ರಾಥಮಿಕ ಶಿಕ್ಷಣ] ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
5. ನಿರ್ದೇಶಕರು [ಅಲ್ಪಸಂಖ್ಯಾತರ ಭಾಷಾ ಶಾಲೆಗಳ ನಿರ್ದೇಶನಾಲಯ] ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
6. ನಿರ್ದೇಶಕರು ಡಿ.ಎಸ್.ಇ.ಆರ್.ಟಿ. ನಂ.4, ಬಿಎಸ್.ಕೆ 3ನೇ ಹಂತ, ಹೊಸ್ಕೆರೆಹಳ್ಳಿ ಲೇಔಟ್, ಬನಶಂಕರಿ, ಬೆಂಗಳೂರು.
7. ಜಂಟಿ ನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
8. ರಾಜ್ಯದ ಎಲ್ಲ ಉಪನಿರ್ದೇಶಕರು [ಆಡಳಿತ] ರವರಿಗೆ. ಇವರ ಕಾರ್ಯವ್ಯಾಪ್ತಿಯಲ್ಲಿ ಬರುವ ಶಾಲೆಗಳಿಗೆ ಕಳುಹಿಸಲು.
9. ರಾಜ್ಯದ ಎಲ್ಲ ಉಪನಿರ್ದೇಶಕರು [ಅಭಿವೃದ್ಧಿ] ರವರಿಗೆ. ಇವರ ಕಾರ್ಯವ್ಯಾಪ್ತಿಯಲ್ಲಿ ಬರುವ ಶಾಲೆಗಳಿಗೆ ಕಳುಹಿಸಲು.
10. ಹಿರಿಯ ಸಹಾಯಕ ನಿರ್ದೇಶಕರು [ಇ-ಆಡಳಿತ] ರವರಿಗೆ. ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು.
11. ಕಛೇರಿ ಪ್ರತಿ.